**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್-ಸಂಖ್ಯೆ 129,ರಲ್ಲಿ ದಿನಾಂಕ: 13.01.2022ರಂದು ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು.**

ದಿನಾಂಕ13.01.2022ರಂದು ವಾರ್ಡ್ ಸಂಖ್ಯೆ 129ರ ಜನವರಿ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್‌ಸಂಖ್ಯೆ:129ರ ವಾರ್ಡ್ ಕಛೇರಿಯು ನವೀಕರಣಗೊಳ್ಳುತ್ತಿರುವುದರಿಂದ ಬಾಲಾಜಿ ನಗರ ನಾಗರೀಕರ ಹಿತರಕ್ಷಣ ವೇದಿಕೆ ಕಛೇರಿಯಲ್ಲಿ ಸ್ಥಳೀಯ ನಿವಾಸಿಗಳು ರವರುಗಳೊಂದಿಗೆ ನಡೆಸಲಾಯಿತು. ಹಾಗೂ ಈ ಕೆಳಕಂಡಂತೆ ಸದಸ್ಯರು/ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಜೆ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು (ದಾಸರಹಳ್ಳಿ ವಲಯ) ಹಾಗೂ ವಾರ್ಡ್ 129 ನೋಡಲ್ ಅಧಿಕಾರಿಗಳು
2. ಮಾರ್ಷಲ್ ವಾರ್ಡ್-129
3. ಸಹಾಯಕ ಅಭಿಯಂತರರು ಹಾಜರಾಗಿರುವದಿಲ್ಲ.
4. ಶ್ರೀಮತಿ.ಅನಿತಾ, ಕಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್-129 'ಬಿ'ಹಾಜರಿರುತ್ತಾರೆ.
5. ಶ್ರೀ.ಜಯರಾಮಯ್ಯ ಅಧ್ಯಕ್ಷಕರು ಹಾಜರಿರುತ್ತಾರೆ.
6. ಶ್ರೀ. ರಾಮಣ್ಣ. ಎನ್.ಜಿ.ಇ.ಎಫ್ ಬಡಾವಣೆ ಮಲ್ಲತ್ತಹಳ್ಳಿ ವಾಡ್-129 ನಿವಾಸಿ
7. ಶ್ರೀ.ದತ್ತಾ, ಶ್ರೀ. ವೇಣುಗೋಪಾಲ್‌ಎನ್.ಜಿ.ಇ.ಎಫ್ ಬಡಾವಣೆಸ್ಥಳಿಯ ನಿವಾಸಿ, ವಾರ್ಡ್ -129

ಸದರಿ ವಾರ್ಡ್ ಸಮಿತಿ ಸಭೆಯನ್ನು ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸದರಿ ಸಭೆಯಲ್ಲಿ ಬಾಲಾಜಿ ನಗರ ಶ್ರೀ .ಜಯರಾಮಯ್ಯ ರವರು ಮಾತನಾಡುತ್ತ ಘನತ್ಯಾಜ್ಯ ಸಂಗ್ರಹಣೆಗೆ ಸಂಬಂಧಿಸಿದಂತೆ ಹಸಿ ತ್ಯಾಜ್ಯವು ದಿನನಿತ್ಯ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ಹಾಗೂ ಒಣ ತ್ಯಾಜ್ಯಕ್ಕೆ ಮತ್ತು ರಸ್ತೆ ಗುಡುಸುವಿಕೆಗೆ ಸಂಬಂಧಿಸಿದಂತೆ ಸಂಗ್ರಹಣೆವಾಗುತ್ತಿಲ್ಲದಿರುವುದರ ಬಗ್ಗೆ ಕ್ರಮ ವಹಿಸಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ, ತತ್ಸಂಬಂಧ ಹಾಜರಿದ್ದ ಕಿರಿಯ ಆರೋಗ್ಯ ಪರಿ ವೀಕ್ಷಕರು ಮಾತನಾಡುತ್ತ ಒಣ ತ್ಯಾಜ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸಂಗ್ರಹಣೆಗೆ ವಾಹನ ಸೌಲಭ್ಯವನ್ನು ಕಲ್ಪಿಸಿದ್ದು ಸದರಿ ಬಡಾವಣೆಯ ರಸ್ತೆಗಳಿಗೆ ವಾರದ ಸೋಮವಾರ ಮತ್ತು ಗುರುವಾರದಂದು ಸಂಗ್ರಹಿಸಲು ನಿಯೋಜಿಸಿರುವುದಾಗಿ ಅದರಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿರುತ್ತಾರೆ. ಅದರಂತೆ ವಾರದ ಎರಡು ದಿನಗಳು ತಪ್ಪದೇ ಒಣ ತ್ಯಾಜ್ಯವನ್ನು ಸಂಗ್ರಹಿಸಲು ಕ್ರಮ ವಹಿಸಬೇಕೆಂದು ಮತ್ತು ಪೌರಕಾರ್ಮಿಕರು ಕೊರತೆ ಇರುವುದರಿಂದ ವಾರಕ್ಕೆ ಒಮ್ಮೆಯಾದರೂ ಗ್ಯಾಂಗ್ ವರ್ಕ್/ಇಂಟೆನ್ಸೀವ್ ಕ್ಲೀನಿಂಗ್ ಹಮ್ಮಿಕೊಂಡು Street sweeping ಮಾಡಿಸಬೇಕೆಂದು ಹಾಜರಿದ್ದ ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ.

ಕ್ರಮ:- ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 129/ಸ.ಕಾ.ನಿ.ಅ (ಘ.ತ್ಯ.ನಿ)ವಾರ್ಡ್129.

ಸದರಿ ಬಡಾವಣೆಯಲ್ಲಿನ ರಸ್ತೆಗಳಲ್ಲಿ ರಸ್ತೆಗುಂಡಿಗಳು ಬಹಳಷ್ಟು ಇರುವುದರಿಂದ ಕೂಡಲೇ ಸದರಿ ರಸ್ತೆಗಳಿಗೆ ಡಾಂಬರೀಕರಣ ಮಾಡಿಸಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಸ್ಥಳೀಯನಿವಾಸಿಗಳು ಕೋರಿದ್ದು ತತ್ಸಂಬಂಧ ದೂರವಾಣಿ ಮುಖಾಂತರ ವಾರ್ಡ್ 129 ರ ಸಹಾಯಕ ಅಭಿಯಂತರರೊಂದಿಗೆ ಚರ್ಚಿಸಲಾಗಿ ಈಗಾಗಲೇ ಪ್ಯಾಕೇಜ್ ಅಡಿಯಲ್ಲಿ ಬಾಲಾಜಿ ನಗರದ ರಸ್ತೆಗಳು ಸೇರಿರುವುದಾಗಿ ಹಾಗೂ ಅತೀ ಶೀಘ್ರವಾಗಿ ಅನುಮೋದನೆಯಾಗಿರುವ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಕ್ರಮ ವಹಿಸುವುದಾಗಿ ತಿಳಿಸಿದ್ದು ಅದರಂತೆ ಸಭೆಯಲ್ಲಿ ಮಾಹಿತಿಯನ್ನು ನೀಡಲಾಗಿರುತ್ತದೆ.

ಕ್ರಮ:- ಸಹಾಯಕ ಅಭಿಯಂತರರು ವಾರ್ಡ್ 129/ಸ.ಕಾ.ನಿ.ಅ ವಾರ್ಡ್129.

ಬಾಲಾಜಿ ನಗರದ ನಾಗರೀಕರ ಹಿತರಕ್ಷಣೆ ಕಛೇರಿಯು ಇರುವ ಜಾಗವು ಸಿಎ ನಿವೇಶನವಾಗಿದ್ದು ಸದರಿ ನಿವೇಶನಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸಿ ಬೇಲಿ ಹಾಕಿಸಲು ಕ್ರಮ ವಹಿಸಬೇಕೆಂದು ಹಾಜರಿದ್ದ ಸ್ಥಳೀಯ ನಿವಾಸಿಗಳು ಕೋರಿದ್ದು ತತ್ಸಂಬಂಧ ಸದರಿ ವಾರ್ಡ್ ಸಹಾಯಕ ಅಭಿಯಂತರರನ್ನು ಸ್ಥಳ ಪರಿಶೀಲಿಸಿ ನಿಯಾಮಾನುಸಾರ ಅಗತ್ಯ ಕ್ರಮ ವಹಿಸಲು ಸೂಚಿಸಲಾಗುವುದೆಂದು ಹಾಜರಿದ್ದ ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು ವಾರ್ಡ್ 129/ಸ.ಕಾ.ನಿ.ಅ ವಾರ್ಡ್129 ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸುವುದು. ಹಾಗೂ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅಧ್ಯಕ್ಷರಾದ ಶ್ರೀ.ಜಯರಾಮಯ್ಯ ರವರ ಮಾಹಿತಿಗೆ ತರಲು ಕ್ರಮ ವಹಿಸುವುದು.

ಸದರಿ ಬಡಾವಣೆಯ ಮುಖಾಂತರ ಹಾದುಹೋಗುವ ಮಳೆ ನೀರು ಚರಂಡಿಯು ದುರಸ್ತಿ ಆಗಿರುವುದರಿಂದ ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯದೆ ಹೊಂದಿಕೊಂಡಂತಿರುವ ರಸ್ತೆಗಳಲ್ಲಿ ಪ್ರವಾಹ ವಾಗುತ್ತಿರುವುದಾಗಿ ಸ್ಥಳೀಯ ನಿವಾಸಿಗಳು ತಿಳಿಸಿದ್ದು ತತ್ಸಂಬಂಧ ಮಳೆ ನೀರು ಚರಂಡಿಯ ವಿಭಾಗದ ಸ.ಕಾ.ನಿ.ಅ ರವರನ್ನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನಿಯಾಮಾನುಸಾರ ಅಗತ್ಯ ಕ್ರಮ ವಹಿಸಲು ತಿಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಲಾಯಿತು.

ಕ್ರಮ:- ಮಳೆ ನೀರು ಚರಂಡಿಯ ವಿಭಾಗದ ಸಹಾಯಕ ಅಭಿಯಂತರರು ಮತ್ತು ಸ.ಕಾ.ನಿ.ಅ ವಾರ್ಡ್129 ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅಧ್ಯಕ್ಷರಾದ ಶ್ರೀ.ಜಯರಾಮಯ್ಯ ರವರ ಮಾಹಿತಿಗೆ ತರಲು ಕ್ರಮ ವಹಿಸುವುದು.

ಸದರಿ ಬಡಾವಣೆಯಲ್ಲಿನ 5ನೇ ಅಡ್ಡ ರಸ್ತೆಯಲ್ಲಿ ಒಳ ಚರಂಡಿಯ ಮ್ಯಾನ್ ಹೋಲ್ ದುರಸ್ಥಿ ಆಗಿರುವುದರಿಂದ ಪದೇ ಪದೇ ಒಳ ಚರಂಡಿಯ ನೀರು ಸರಾಗವಾಗಿ ಹರಿಯದೇ ಸದರಿ ರಸ್ತೆ ಹಾಗೂ ಹೊಂದಿಕೊಂಡಂತಹ ರಸ್ತೆಗಳಲ್ಲಿ ಹರಿಯುತ್ತಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದಾಗಿ ಹಾಗೂ ಸದರಿ ರಸ್ತೆಗಳಲ್ಲಿ ಒಳ ಚರಂಡಿಯ ಪೈಪುಗಳನ್ನು ಉನ್ನತೀಕರಣಗೊಳಿಸಬೇಕೆಂದು ಸ್ಥಳೀಯ ನಿವಾಸಿಗಳು ಕೋರಿದ್ದು ತತ್ಸಂಬಂಧ ಸದರಿ ವಿಭಾಗದ ಸಹಾಯಕ ಅಭಿಯಂತರರಿಗೆ ಸ್ಥಳ ಪರಿಶೀಲಿಸಿ ನಿಯಾಮಾನುಸಾರ ಅಗತ್ಯ ಕ್ರಮ ವಹಿಸಲು ತಿಳಿಸಲಾಗುವುದೆಂದು ಸಭೆಯಲ್ಲಿ ತಳಿಸಲಾಯಿತು.

ಕ್ರಮ:- BWSSB ವಿಭಾಗದ ಸಹಾಯಕ ಅಭಿಯಂತರರು ಮತ್ತು ಸ.ಕಾ.ನಿ.ಅ ವಾರ್ಡ್129 ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅಧ್ಯಕ್ಷರಾದ ಶ್ರೀ.ಜಯರಾಮಯ್ಯ ರವರ ಮಾಹಿತಿಗೆ ತರಲು ಕ್ರಮ ವಹಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸೂಚಿಸಿರುವ ಸಂಬಂಧ ಪಟ್ಟ ಅಧಿಕಾರಿಗಳು ಅಗತ್ಯ ಕ್ರಮವಹಿಸಿ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಹಾಜರಾಗಿರುವುದಿಲ್ಲ)
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಿಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲುಕೋರಿದೆ.
2. ಜಂಟಿ ಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯ ರವರ ಮಾಹಿತಿಗಾಗಿ
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.